## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/2443/2019–20 ದಿನಾಂಕ: 18–11–2019.

### " ಇ-ಟೆಂಡರ್ ಪ್ರಕಟಣೆ ಸಂಖ್ಯೆ: 07/2019 "

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ಘಟಕದ ಆವರಣದಲ್ಲಿ ರಾಷ್ಟ್ರೀಯ ಹೆದ್ದಾರಿ-4 ರ ಕಡೆಗೆ ನಕ್ಷೆಯಲ್ಲಿ ತೋರಿಸಿರುವಂತೆ ಮೂರು ಸ್ಥಳಗಳಲ್ಲಿ ಹೋರ್ಡಿಂಗ್ಸ್‌ಗಳನ್ನು ಪ್ರದರ್ಶಿಸಲು ಐದು ವರ್ಷಗಳ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ: 11–12–2019 ರಂದು ಇ-ಟೆಂಡರ್ ನಿಗದಿಪಡಿಸಲಾಗಿದೆ. ಇ-ಟೆಂಡರ್ ಅರ್ಜಿಗಳನ್ನು / ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಅರ್ಜಿ ಶುಲ್ಕವನ್ನು ಮತ್ತು ಇ.ಎಂ.ಡಿ ಮೊತ್ತವನ್ನು Divisional Controller, KSRTC, Bengaluru Central Division, Bengaluru ರವರ ಹೆಸರಿನಲ್ಲಿ ಡಿಡಿಯನ್ನು ಪಡೆದು, ಮೂಲ ಡಿಡಿಗಳನ್ನು ಹಾಗೂ ವಿಳಾಸದ ಬಗ್ಗೆ ಮೂಲ ದಾಖಲಾತಿಗಳನ್ನು ಟೆಂಡರ್ ತೆರೆಯುವ ಕೊನೆಯ ದಿನಾಂಕದೊಳಗೆ ಖುದ್ದಾಗಿ ಹಾಜರುಪಡಿಸುವುದು. ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ ಮೊತ್ತದ ಡಿಡಿ ಪ್ರತಿಗಳನ್ನು, ವಿಳಾಸದ ಮಾಹಿತಿ ಬಗ್ಗೆ ಹಾಗೂ ಸಂಬಂಧಪಟ್ಟ ದಾಖಲಾತಿಗಳ ಪ್ರತಿಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: 09–12–2019 ರಂದು 12:00 ಗಂಟೆಯವರೆಗೆ ಅಪ್‌ಲೋಡ್ ಮಾಡಬಹುದು. ದಿನಾಂಕ: 11–12–2019 ರಂದು (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) ಇ-ಟೆಂಡರ್‌ನ್ನು ತೆರೆಯಲಾಗುವುದು. ಭಾಗವಹಿಸಿರುವವರು ಇ-ಟೆಂಡರ್ ತೆರೆಯುವ ಸಮಯದಲ್ಲಿ ಹಾಜರಿರುವುದು.

ಪ್ಯಾಕೇಜ್ ನಂ-1 ನೆಲಮಂಗಲ ಘಟಕದ (ಅರಿಶಿನಕುಂಟೆ) ರಾಷ್ಟ್ರೀಯ ಹೆದ್ದಾರಿ-4 ರ ಕಡೆಗೆ ನಕ್ಷೆಯಲ್ಲಿ ತೋರಿಸಿರುವಂತೆ ತೆರೆದ ಸ್ಥಳದಲ್ಲಿ ಹೋರ್ಡಿಂಗ್ಸ್ ಮುಖಾಂತರ ಜಾಹೀರಾತು ಅಳವಡಿಸಲು ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ಸ್ಥಳದ ವಿವರ | ಅಳತೆ (ಚದರ ಅಡಿಗಳಲ್ಲಿ) | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ದರ ಪ್ರತಿ ಚ.ಅಡಿಗೆ | ಮಿತವ್ಯಯ ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ ಮೊತ್ತ | | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| | | | | | | | ಸಂಸ್ಥೆಗೆ | ಇ-ವೇದಿಕೆಗೆ | |
| 1 | ನೆಲಮಂಗಲ ಘಟಕ | 20x10 | 01 | 200 | 20–00 | 4000–00 | 12000–00 | 500–00 | 120+22 |
| 2 | ನೆಲಮಂಗಲ ಘಟಕ | 30x30 | 01 | 900 | 20–00 | 18000–00 | 54000–00 | 500–00 | 180+32 |
| 3 | ನೆಲಮಂಗಲ ಘಟಕ | 30x30 | 01 | 900 | 20–00 | 18000–00 | 54000–00 | 500–00 | 180+32 |

ಇ-ಟೆಂಡರ್‌ನಲ್ಲಿ ಭಾಗವಹಿಸುವವರ ಪೈಕಿ ಯಶಸ್ವಿಯಾದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಕೇಂದ್ರ/ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳು ಮತ್ತು ಷರತ್ತುಗಳಿಗೆ ಬದ್ಧರಾಗಿರಬೇಕು. ಸಲ್ಲಿಸಿರುವ ಅರ್ಜಿಗಳು ಕ್ರಮಬದ್ಧವಾಗಿಲ್ಲದ ಪಕ್ಷದಲ್ಲಿ ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೆ ಇ-ಟೆಂಡರ್‌ನ್ನು ಪುರಸ್ಕರಿಸುವ / ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990267 & 7760990252 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ.
ಶಾಂತಿನಗರ, ಬೆಂಗಳೂರು

**ಪ್ರತಿಯನ್ನು ಗೌರವಪೂರ್ವಕವಾಗಿ:–**

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.

ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ರವರ ಮಾಹಿತಿಗಾಗಿ.

ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ.

**ಪ್ರತಿಯನ್ನು:** ಉಪ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ/ವಿಭಾಗ ಸಂಚಾಲನಾಧಿಕಾರಿ/ಲೆಕ್ಕಾಧಿಕಾರಿ/ಸಹಾಯಕ ಕಾಮಗಾರಿ ಅಭಿಯಂತರರು/ಕಾನೂನು ಅಧಿಕಾರಿ, ಕ.ರಾ.ರ.ಸಾ. ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ. ಹಾಗೂ ದಿನಾಂಕ: 11–12–2019 ರಂದು ತಪ್ಪದೇ ಇ-ಟೆಂಡರ್‌ನಲ್ಲಿ ಭಾಗವಹಿಸಲು ಸೂಚಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ.